> ಕಬೀರ್ ಹೇಳುವಂತೆ ಬಾವಿಗಳು ಅನೇಕ ಆದರೆ ಅದರೊಳಗಿನ ನೀರು ಒಂದೇ. ಸಾಂಸ್ಕೃತಿಕವಾದ ಏಕತೆ ಮತ್ತು ಬಹುಕುಳತೆ, ಒಂದುತನ ಮತ್ತು ಅನೇಕತನವನ್ನು ಹಿಡಿಯುವುದು ಕಾವ್ಯದ ಮುಖ್ಯ ಕೆಲಸ.



ಓದಿಕೊಂಡೆ. ಆಮೇಲೆ ಇದಕ್ಕೆ ಸಂವಾದಿಯಾದದ್ದು ಜಗತ್ತಿನಲ್ಲೇನಿದೆ? ಅದನ್ನು ಹುಡುಕತೊಡಗಿದೆ. ಅಂದ್ರೆ ನನ್ನ ನೆಲೆಯಲ್ಲಿ ನಿಂತು ನಾನು ಜಗತ್ತಿನ ಸಂವಾದಿಗಳನ್ನು ಇಂಟಿಮೇಟ್ ಮಾಡಿಕೊಳ್ಳೋದಕ್ಕೆ ಯತ್ನಿಸಿದೆ. ಹೀಗಾಗಿ ನಾನು ಅನೇಕ ಸಂಸ್ಕೃತಿಗಳಲ್ಲಿ, ಕಾಲದೇಶಗಳಲ್ಲಿ ಹರಿದು ಹಂಚಿಹೋಗಿದ್ದೇನೆ. ಮತ್ತು ಇದೆಲ್ಲವನ್ನೂ ನನ್ನ ಮೂಲ ಬಿಂದು ಏನಿದೆ ಅದರಲ್ಲಿ ಇಳಿಸಿಕೊಳ್ಳಲು ಚಡಪಡಿಸಿದ್ದೇನೆ. ಇದು ಪ್ರಜ್ಞಾಪೂರ್ವಕವೂ ಹೌದು, ಅಪ್ರಜ್ಞಾಪೂರ್ವಕವೂ ಹೌದು. ಇದನ್ನು ನಾನು ಕಲೋನಿಯಲ್ ಪ್ರಭಾವ ಇತ್ಯಾದಿ ಅಂತೇನೂ ಮಾಡ್ಲಿಲ್ಲ. ವಿಶ್ವಾತ್ಮಕ ಅಭಿವ್ಯಕ್ತಿಗಳ ಸಮಾನಕೇಂದ್ರಗಳನ್ನು ಹುಡುಕ್ತಾ ಇದ್ದೆ. ಇತ್ಯಾತ್ಮಕ ದೃಷ್ಟಿ ಇದರ ಹಿಂದೆ ಇತ್ತು. ನಿನ್ನ ಹಿಂದಿನ ಪ್ರಶ್ನೆಗೂ ಇದೇ ಉತ್ತರ ಕೊಡಬಹುದು ಅನಿಸುತ್ತೆ.

◆ **ನಿಮ್ಮ ಆರಂಭಿಕ ಕವನ ಸಂಕಲನ 'ಮಿಲರೇಪ'ದ ನುಡಿಗಟ್ಟು ಬೌದ್ಧಮಾರ್ಗದ ಅನೇಕ ಪ್ರಸಂಗ, ವ್ಯಕ್ತಿಗಳನ್ನು ಒಳಗೊಂಡಿದೆ. ಇದರ ಕಾವ್ಯ ಕಲ್ಪನೆಗಳು ಕೂಡ ಆಗ ಬರ್ತಾ ಇದ್ದ ಕಾವ್ಯಕ್ಕಿಂತ ವಿಭಿನ್ನ. ನವ್ಯದ ನುಡಿಗಟ್ಟು ಬೇರೆಯಾಗಿತ್ತು. ಆಗತಾನೆ ಶುರುವಾಗಿದ್ದ ಬಂಡಾಯದ ನುಡಿಗಟ್ಟು ಕೂಡ ಬೇರೆ ಬಗೆಯದೆ ಆಗಿತ್ತು. ಇವುಗಳ ನಡುವೆ ನೀವು ಈ ಬೌದ್ಧಮಾರ್ಗದಿಂದ ಕಲಿತದ್ದೇನು? ಅಥವಾ ನಿಮ್ಮ ಕಾವ್ಯದ ಧಾತು ಮತ್ತು ದೃಷ್ಟಿ ಉಳಿದವರಿಗಿಂತ ಬೇರೆಯಾಗಲು ಏನು ಕಾರಣ?**

ಆ ಕಾಲದಲ್ಲಿ ನಾನು ಯುರೋಪಿನ ಕಾವ್ಯವನ್ನು ತುಂಬಾ ಓದ್ತಿದ್ದೆ. ರೋಮ್ಯಾಂಟಿಕ್ ಕಾವ್ಯವನ್ನು ಓದ್ತಿದ್ದೆ. ವಚನ, ಕೀರ್ತನೆ, ಜಾನಪದದ ಓದಂತೂ ನಡೀತಾನೆ ಇತ್ತು. ಅಲ್ಲದೆ ನನ್ನ ತಾಯಿಯ ಮೂಲಕ ತಮಿಳು ಕಾವ್ಯ ಪರಂಪರೆಯ ಒಂದು ಸ್ಥೂಲವಾದ ಪರಿಚಯವಿತ್ತು. ಅಲ್ಲದೆ ಆ ಕಾಲದಲ್ಲಿ ನಾನು ಗೋಪಾಲಕೃಷ್ಣ ಅಡಿಗರ ಜೊತೆ ತುಂಬಾ ಓಡಾಡ್ತಾ ಇದ್ದೆ. 'ಅಕ್ಷರ ಹೊಸ ಕಾವ್ಯ' ನನ್ನನ್ನು ಗುರುತಿಸಿತ್ತು. ಕೆ.ಎಸ್. ನಿಸಾರ್ ಅಹಮದ್ ಅವರ ಸಾಂಗತ್ಯವೂ ಸಿಕ್ಕಿತ್ತು. ಅನೇಕ ಕನ್ನಡದ ಪ್ರಾತಿನಿಧಿಕ ಸಂಕಲನಗಳನ್ನು ಓದ್ಕೊಂಡಿದ್ದೆ. ಶಾಂತರಸರು ಮಾಡಿದ್ದು, ಬುದ್ಧಣ್ಣ ಹಿಂಗಮಿರೆ ಇತ್ಯಾದಿ. ಆದ್ರೆ ಅಡಿಗರು, ಕೆ.ಎಸ್. ನರಸಿಂಹಸ್ವಾಮಿ, ಗಂಗಾಧರ ಚಿತ್ತಾಲರು,